ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಆಯುಕ್ತರು/ಪಿಆರ್/10 b/2016–17

ಆಯುಕ್ತರವರ ಕಛೇರಿ,
ಎನ್.ಆರ್.ಚೌಕ, ಬೆಂಗಳೂರು–02
ದಿನಾಂಕ: 29/12/16

ರವರಿಗೆ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ನಗರಾಭಿವೃದ್ದಿ ಇಲಾಖೆ
ವಿಕಾಸ ಸೌಧ
ಬೆಂಗಳೂರು.

ವಿಷಯ:– 2015–16 ನೇ ಸಾಲಿನ ನಗರೋತ್ಥಾನ ಅನುದಾನದಡಿ ಕೈಗೊಳ್ಳಲು ಉದ್ದೇಶಿಸಿರುವ ಪ್ಯಾಕೇಜ್ ಕಾಮಗಾರಿ **Improvements to roads, drains and Drilling borewells in ward no. 09, 10 & 11 of Vidyaranyapura sub division (Number of Works- 11)** ಯೋಜನೆಯ ಟೆಂಡರ್ ಅನುಮೋದನೆಗೊಂಡಿರುವ ಮಾಹಿತಿ ನೀಡುವ ಬಗ್ಗೆ.

ಉಲ್ಲೇಖ :1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ನಅಇ/449/ಎಸ್.ಎಫ್.ಸಿ 2015 ಬೆಂಗಳೂರು ದಿನಾಂಕ : 24–11–2015.

2. ಮಾನ್ಯ ಆಯುಕ್ತರ ಸುತ್ತೋಲೆ ಸಂಖ್ಯೆ:ಆಯುಕ್ತರು/ಪಿ.ಆರ್/176/15–16 ದಿನಾಂಕ: 22–12–2015

3. ಮಾನ್ಯ ಆಯುಕ್ತರ ಸುತ್ತೋಲೆ ಸಂಖ್ಯೆ : ಅ/ಪಿ.ಆರ್/9535/15–16 ದಿನಾಂಕ: 01–01–2016

4. ಸರ್ಕಾರದ ಆದೇಶ ಸಂಖ್ಯೆ: ನಅಇ 08 ಎಸ್ ಎಫ್‌ಸಿ 2016. ಬೆಂಗಳೂರು ದಿನಾಂಕ:23.01.2016

5. EE/BTP/BBMP/EPMT/04/2015-16 Dated: 01.02.2016

6. ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ: ಆ\ಪಿಆರ್\784\2016–17 ದಿನಾಂಕ:25.04.2016.

7. ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:ವಾಕಾಸ್ಥಾಸ/225/2016–17 ದಿನಾಂಕ:06.09.2016ರಲ್ಲಿ ಕೌನ್ಸಿಲ್ ಸಭೆಯಲ್ಲಿ ಅನುಮೋದಿಸಿರುವಂತೆ.

8. ದಿನಾಂಕ:29.11.2016ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ, ವಿಷಯದ ಸಂಖ್ಯೆ:09(280)/2016–17 ರಲ್ಲಿ ಮಹಾಪೌರರು ಅನುಮೋದಿಸಿರುವಂತೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2015–16 ನೇ ಸಾಲಿಗೆ ಘನ ಸರ್ಕಾರದ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ ಅಡಿಯಲ್ಲಿ ಪಾಲಿಕೆಗೆ ಬಿಡುಗಡೆ ಮಾಡಿರುವ ರೂ. 305.00 ಕೋಟಿಗಳ ಅನುದಾನದ ಕ್ರಿಯಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ:449:ಎಸ್ಎಫ್‌ಸಿ.2015, ಬೆಂಗಳೂರು ದಿನಾಂಕ: 24.11.2015 ರಂತೆ ಅನುಮೋದನೆ ನೀಡಲಾಗಿರುತ್ತದೆ.

ಮುಖ್ಯ ಅಭಿಯಂತರರು (ಯಲಹಂಕ) ರವರು ಆದೇಶಿಸಿರುವಂತೆ ದಿನಾಂಕ:26.04.2016 ರಂದು ಮಾನ್ಯ ಮುಖ್ಯ ಅಭಿಯಂತರರುರವರ ಅಧ್ಯಕ್ಷತೆಯಲ್ಲಿ ಟೆಂಡರ್ ಮೌಲ್ಯ ಮಾಪನ ಸಮಿತಿಯಲ್ಲಿ ಚರ್ಚಿಸಿ ಬ್ಯಾಟರಾಯನಪುರ ವಿಭಾಗದ ಪ್ಯಾಕೇಜ್ ಟೆಂಡರ್ **Improvements to roads, drains and Drilling borewells in ward no. 09, 10 & 11 of Vidyaranyapura sub division (Number of Works- 11)** ಕಾಮಗಾರಿಗೆ 01 (ಏಕೈಕ) ಗುತ್ತಿಗೆದಾರರು ಭಾಗವಹಿಸಿದ್ದು ಸದರಿಯವರ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಕಾಮಗಾರಿಯ/ ಯೋಜನೆಯ ಹೆಸರು	ಯೋಜನಾ ಮೊತ್ತ ರೂ. (ಲಕ್ಷಗಳಲ್ಲಿ)	ಟೆಂಡರ್ ಗಿಟ್ಟಿ ಮೊತ್ತ ರೂ. (ಲಕ್ಷಗಳಲ್ಲಿ)	ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರು	ಷರಾ
01	Improvements to roads, drains and Drilling borewells in ward no. 09, 10 & 11 of Vidyaranyapura sub division (Number of Works- 11)	305	262.25	ಶ್ರೀ. ಕೆ.ಬಿ.ಅಲಂಕಾರ್	Qualified

ಸದರಿ ಪ್ಯಾಕೇಜಿನ ತಾಂತ್ರಿಕ ಬಿಡ್‌ನ್ನು ದಿನಾಂಕ: 21.03.2016 ರಂದು ತೆರೆಯಲಾಗಿರುತ್ತದೆ. ಬಿಡ್‌ದಾರರಾದ 01) ಶ್ರೀ. ಕೆ.ಬಿ.ಅಲಂಕಾರ್ ರವರು ತಾಂತ್ರಿಕವಾಗಿ ಆರ್ಹತೆ ಹೊಂದಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಮೌಲ್ಯ ಮಾಪನಾ ತುಲನಾತ್ಮಕ ಪಟ್ಟಿಯನ್ನು ಕಡತದಲ್ಲಿ ಲಗತ್ತಿಸಿದೆ. (ಅನುಬಂಧ-1)

ದಿನಾಂಕ: 28.04.2016 ರಂದು ನಡೆದ ಟೆಂಡರ್ ಮೌಲ್ಯ ಮಾಪನಾ ಸಮಿತಿಯಲ್ಲಿ ಸದರಿ ಪ್ಯಾಕೇಜಿನ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಗುತ್ತಿಗೆದಾರರು ಸಲ್ಲಿಸಿರುವ ಟೆಂಡರ್ ತಾಂತ್ರಿಕವಾಗಿ ಅರ್ಹರಾಗಿರುವುದರಿಂದ ಟೆಂಡರ್‌ನ ಆರ್ಥಿಕ ಬಿಡ್ಡನ್ನು ತೆರೆಯಲು ಸಭೆ ತೀರ್ಮಾನಿಸಿರುತ್ತದೆ. ಸಭೆಯ ನಡವಳಿಯನ್ನು ಕಡತದಲ್ಲಿ ಲಗತ್ತಿಸಿದೆ. (ಅನುಬಂಧ-2)

ಸಭೆಯ ನಿರ್ಣಯದಂತೆ ದಿನಾಂಕ: 29.04.2016 ರಂದು ತಾಂತ್ರಿಕವಾಗಿ ಅರ್ಹರಾದ ಏಕೈಕ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ತೆರೆಯಲಾಗಿದ್ದು, ವಿವರ ಈ ಕೆಳಕಂಡಂತಿದೆ.

ಕ್ರ, ಸಂ	ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) SR 2015-16	ಟೆಂಡರ್ ಗಿಟ್ಟಿ ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂಗಳಲ್ಲಿ)	2015-16 ನೇ ಸಾಲಿನ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ದಿ:09.02.16
1	ಶ್ರೀ. ಕೆ.ಬಿ.ಅಲಂಕಾರ್	305.00	262.25	25615718.16	+0.93%

ಮೇಲ್ಕಂಡ ಇ-ಪ್ರೊಕ್ಯೂರ್‌ಮೆಂಟ್ ಪ್ರಕಟಣೆ ನೋಂದಣಿ ಪಡೆದ ಗುತ್ತಿಗೆದಾರರಾದ ಶ್ರೀ. ಕೆ.ಬಿ.ಅಲಂಕಾರ್ ರವರು ನಮೂದಿಸಿರುವ ದರಗಳು ಸ್ಪರ್ಧಾತ್ಮಕ ದರಗಳಾಗಿರುತ್ತದೆ, 2015-16ನೇ ಸಾಲಿನ ಷರಿಷ್ಕೃತ ದರಗಳಿಗೆ ಹೊಲಿಸಿದಾಗ (ದಿನಾಂಕ:09.02.2016) +0.93% ಹೆಚ್ಚು ಆಗಿರುತ್ತದೆ. ಆದ್ದರಿಂದ ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. 2,56,15,718.16 (ಶೇ.+0.93%) ರಷ್ಟು ಹೆಚ್ಚು ಇರುತ್ತದೆ.

ಘನ ಸರ್ಕಾರವು ಉಲ್ಲೇಖ(1)ರಲ್ಲಿ ಕಾಮಗಾರಿಗಳ ಪಟ್ಟಿಗೆ ಅನುಮೋದನೆ ನೀಡಿದ್ದು, ತದನಂತರ ಪಾಲಿಕೆಯು ನಿಯಮಗಳಂತೆ ಅಗತ್ಯ ಕ್ರಮಗಳನ್ನು ಕೈಗೆತ್ತಿಕೊಂಡು ಯಲಹಂಕ ವಲಯಕ್ಕೆ ಸೇರಿನ ಬ್ಯಾಟರಾಯನಪುರ ವಿಭಾಗದ ವ್ಯಾಪ್ತಿಗೆ ಸಂಬಂಧಪಟ್ಟಂತೆ ಕಾಮಗಾರಿಗಳ ಟೆಂಡರ್ ಪ್ಯಾಕೇಜ್ ಕನಿಷ್ಠ ಗುತ್ತಿಗೆದಾರರಾದ ಶ್ರೀ. ಕೆ.ಬಿ.ಅಲಂಕಾರ್ ರವರು ನಮೂದಿಸಿರುವ ಮೊತ್ತ ರೂ. 2,56,15,718.16 ಕ್ಕೆ ಹೋಲಿಸಿದಾಗ ಶೇ. -2.32% ರಷ್ಟು ಕಡಿಮೆ ಇರುತ್ತದೆ.

ಈ ಟೆಂಡರ್‌ಗೆ ಸಂಬಂಧಪಟ್ಟಂತೆ ಸಂಪೂರ್ಣ ವಿವರಗಳನ್ನು ಉಲ್ಲೇಖ(07) ರಲ್ಲಿ ಗುರುತಿಸಿದಂತೆ ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ ಹಾಗೂ ನಡವಳಿಗಳ ದಿನಾಂಕ: 06.09.2016ರ ಪ್ರತಿಗಳನ್ನು ಮತ್ತು ಸಂಪೂರ್ಣ ವಿವರಗಳನ್ನು ಉಲ್ಲೇಖ(08)ರಲ್ಲಿ ಗುರುತಿಸಿದಂತೆ ಪಾಲಿಕೆಯ ಸಭೆಯಲ್ಲಿ ವಿಷಯವಾಗಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಹಾಗೂ ನಡವಳಿಗಳ ದಿನಾಂಕ:29.11.2016ರ ಪ್ರತಿಗಳನ್ನು ಕಡತದಲ್ಲಿ ಲಗತ್ತಿಸಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ ಸದರಿ ಪ್ಯಾಕೇಜಿನ ಯೋಜನಾ ಮೊತ್ತ ರೂ. 305.00 (ಮೂರು ನೂರ ಐದು) ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಗುತ್ತಿಗೆದಾರರಾದ ಶ್ರೀ. ಕೆ.ಬಿ.ಅಲಂಕಾರ್ ರವರು ಮೊತ್ತ ರೂ. 2,56,15,718.16 (ಎರಡು ಕೋಟಿ ಐವತ್ತಾರು ಲಕ್ಷದ ಹದಿನೈದು ಸಾವಿರದ ಏಳು ನೂರ ಹದಿನೆಂಟು ಮತ್ತು ಹದಿನಾರು ಪೈಸೆಗಳು ಮಾತ್ರ) ಅನುಮೋದಿತ ಅಂದಾಜು ಮೊತ್ತಕ್ಕೆ ಹೋಲಿಸಿದಾಗ ಶೇ. 2.32 ಕಡಿಮೆ ಇದ್ದು, ಕರ್ನಾಟಕ ಲೋಕೋಪಯೋಗಿ ಇಲಾಖೆಯ 2015-16ಸಾಲಿನ ದರಗಳಿಗೆ ಹೋಲಿಸಿದಾಗ ಶೇಕಡ 0.93% ಹೆಚ್ಚು ಮೊತ್ತದ ಟೆಂಡರ್‌ಗೆ ಘನಸರ್ಕಾರದ ಅನುಮೋದನೆ ನೀಡಲು ಸಲ್ಲಿಸಿದೆ.

ತಮ್ಮ ವಿಶ್ವಾಸಿ

ಆಯುಕ್ತರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಹಾಗೂ
ಸದಸ್ಯ ಕಾರ್ಯದರ್ಶಿ,ಅಧಿಕಾರಯುಕ್ತ ಸಮಿತಿ